## 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಕಡೂರು.

**ಉಪಸ್ಥಿತರು**

ಶ್ರೀಮತಿ ಸವಿತರಾಣಿ ಹೆಚ್.ವಿ.,
ಬಿ.ಎ.ಎಲ್., ಎಲ್ಎಲ್ಬಿ.,
2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,ಕಡೂರು.

## ಅಸಲು ದಾವಾ ಸಂಖ್ಯೆ: 78/2017

**ದಿನಾಂಕ: 22 ನೇ ಅಕ್ಟೋಬರ್ 2024**

**ವಾದಿ/ಯರು:** ಶ್ರೀಮತಿ ಈರಮ್ಮ ಕೋಂ ಭೀಮರಾಜ್,
ಸುಮಾರು 58 ವರ್ಷ ವಯಸ್ಸು, ಗೃಹಿಣಿ,
ವಾಸ: ಚಿಕ್ಕಿಂಗಳ ಗ್ರಾಮ ಮತ್ತು ಅಂಚೆ,
ಬೀರೂರು ಹೋಬಳಿ, ಕಡೂರು ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.

(ಪ್ರತಿನಿಧಿಸುವವರು: ಶ್ರೀಮತಿ ಎಂ.ಕೆ.ಎಂ.,ನ್ಯಾಯವಾದಿಗಳು)

**-ವಿರುದ್ದ-**

**ಪ್ರತಿವಾದಿ/ಯರು:** 1. ಶ್ರೀ ವಿಠಲಪ್ಪ ಬಿನ್ ಲೇಟ್ ತಿಮ್ಮಯ್ಯ, ಸುಮಾರು 63 ವರ್ಷ, ವ್ಯವಸಾಯ,

2. ಕರಿಯಪ್ಪ ಲೇಟ್ ತಿಮ್ಮಯ್ಯ, ಸುಮಾರು 60 ವರ್ಷ, ವ್ಯವಸಾಯ,

3. ಸಗುನಪ್ಪ ಲೇಟ್ ತಿಮ್ಮಯ್ಯ, ಸುಮಾರು 55 ವರ್ಷ, ಕೆಎಸ್ಆರ್ ಪೋಲೀಸ್.

ಪ್ರತಿವಾದಿಗಳ ವಾಸ : ಚಿಕ್ಕಿಂಗಳ ಗ್ರಾಮ,
ಬೀರೂರು ಹೋಬಳಿ, ಕಡೂರು ತಾಲ್ಲೂಕು.

( ಪ್ರತಿನಿಧಿಸುವವರು: ಪ್ರತಿವಾದಿ 1 ರಿಂದ 3 ನೇ ಪ್ರತಿವಾದಿ ಪರ ಶ್ರೀ ಸಿ.ಎಸ್.ಎಸ್.,ವಕೀಲರು, ಪ್ರತಿವಾದಿ 4 ಮತ್ತು 5 ನೇ ಪ್ರತಿವಾದಿಯ ಪರ ಶ್ರೀ ಬಿ.ಎಂ., ವಕೀಲರು, 6 ನೇ ಪ್ರತಿವಾದಿಯ ಪರ ಶ್ರೀ ಸಿ.ವಿ. ಎಸ್.ವಕೀಲರು ಮತ್ತು 7 ನೇ ಪ್ರತಿವಾದಿ ಸ್ವಯಂ ಪ್ರತಿನಿಧಿಸಿರುತ್ತಾರೆ.)

**ಅರ್ಜಿದಾರರು** ಃ ಶ್ರೀಮತಿ ಈರಮ್ಮ

**-ವಿರುದ್ದ-**

**ಎದುರುದಾರರುಃ** ಶ್ರೀ ವಿಠಲಪ್ಪ ಮತ್ತು ಇತರರು

**ಃಃ ಮಧ್ಯಂತರ ಅರ್ಜಿ ಸಂಖ್ಯೆಃ17 ರ ಕುರಿತಾದ ಆದೇಶ ಃಃ**

ವಾದಿ ಪರ ವಕೀಲರು ಪ್ರಸ್ತುತ ಈ ಮಧ್ಯಂತರ ಅರ್ಜಿ ಸಂಖ್ಯೆಃ17 ನ್ನು ಕ್ರಮಾದೇಶ 1 ನಿಯಮ 10(2) ಸಹಕಲಂ 151 ರ ಅಡಿಯಲ್ಲಿ ಅರ್ಜಿಯೊಂದಿಗೆ ಲಗತ್ತಿಸಿರುವ ಪ್ರಮಾಣಪತ್ರದಲ್ಲಿ ನಮೂದಿಸಿರುವ ಅಂಶಗಳನ್ನು ಪರಿಗಣಿಸಿ ಅರ್ಜಿಯಲ್ಲಿ ನಮೂದಿಸಿರುವ ಪ್ರಸ್ತಾವಿತ ಪ್ರತಿವಾದಿ 4 ಮತ್ತು 5 ರವರನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಲು ಅನುಮತಿಯನ್ನು ನೀಡಬೇಕೆಂದು ಕೋರಿ ಸಲ್ಲಿಸಿರುತ್ತಾರೆ.

**2. ಅರ್ಜಿದಾರರು ಅರ್ಜಿಗೆ ಪೂರಕವಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ತನ್ನ ಪ್ರಮಾಣಪತ್ರದಲ್ಲಿನ ಅಂಶಗಳು ಈ ಕೆಳಗಿನಂತೆ ಇವೆಃ-**

ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನ ಕೋರಿ ಸಲ್ಲಿಸಿದ್ದು, ದಾವೆಯನ್ನು ದಾಖಲು ಮಾಡುವ ಸಮಯದಲ್ಲಿ ದಾವಾ ಷೆಡ್ಯೂಲ್ ಐಟಂ ನಂಬರ್ 9, 11 ಮತ್ತು 12 ರ ಸ್ವತ್ತುಗಳು ಹೊರಗಲಮನೆ ತಿಮ್ಮಣ್ಣ ಅಂದರೆ ವಾದಿ ಮತ್ತು ಪ್ರತಿವಾದಿಯರ ಅಜ್ಜನವರ ಹೆಸರಿನಲ್ಲಿರುತ್ತದೆ. ದಾವೆ ದಾಖಲಾಗಿ ಬಾಕಿ ಇರುವಾಗ, 1 ಪ್ರತಿವಾದಿಯ ಮಗನಾದ ಪ್ರಸ್ತಾವಿತ 4 ನೇ ಪ್ರತಿವಾದಿ ನಾಗರಾಜುರವರು ದಾವಾ ಐಟಂ ನಂಬರ್ 10 ಮತ್ತು 11 ರ ಖಾತೆಯನ್ನು ತನ್ನ ಹೆಸರಿಗೆ ಬದಲಾವಣೆ ಮಾಡಿಕೊಂಡಿರುತ್ತಾರೆ.

2 ನೇ ಪ್ರತಿವಾದಿಯ ಸೊಸೆಯಾದ ಪ್ರಸ್ತಾವಿತ 5 ನೇ ಪ್ರತಿವಾದಿ ಅನ್ನಪೂರ್ಣ ಎಂಬುವರು ದಾವಾ ಸ್ವತ್ತಿನ ಸಂಖ್ಯೆಃ 9 ಮತ್ತು 11 ರ ಆಸ್ತಿಗಳನ್ನು 1 ರಿಂದ 3 ನೇ ಪ್ರತಿವಾದಿಗಳೊಂದಿಗೆ ಶರೀಕಾಗಿ ತಮ್ಮ ಹೆಸರಿಗೆ ಬದಲಾವಣೆ ಮಾಡಿಕೊಂಡಿರುತ್ತಾರೆ. ಸದರಿ ಸಂಗತಿಯು ಪ್ರತಿವಾದಿಯು ತನ್ನ ಸಾಕ್ಷಿ ವಿಚಾರಣೆಯಲ್ಲಿ ದಾಖಲಾತಿಗಳನ್ನು

ನಿಶಾನೆಯಾಗಿ ಗುರುತಿಸಿಕೊಂಡಾಗ ನನಗೆ ತಿಳಿದು ಬಂದಿರುತ್ತದೆ. ನಂತರ ಪ್ರತಿವಾದಿಗಳು ತಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸುವಾಗ ಖಾತೆ ಹೊಂದಿರುವಂತಹ ಪಕ್ಷಗಾರರನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲವೆಂದು ತಮ್ಮ ನಿಲುವನ್ನು ನಮೂದಿಸಿರುತ್ತಾರೆ. ಆದ್ದರಿಂದ ಸದರಿ ಪ್ರಸ್ತಾವಿತ ಪ್ರತಿವಾದಿಗಳನ್ನು ಈ ದಾವೆಯಲ್ಲಿ ಸೇರಿಸುವುದು ಅವಶ್ಯಕವಾಗಿರುವುದರಿಂದ ಈ ದಾವೆಯನ್ನು ಅಂತಿಮವಾಗಿ ತೀರ್ಮಾನಿಸಲು ಸಹಾಯಕವಾಗುತ್ತದೆ ಎಂದು ಈ ಅರ್ಜಿಯನ್ನು ಸಲ್ಲಿಸಿದ್ದು, ತನ್ನ ಅರ್ಜಿಯನ್ನು ಪುರಸ್ಕರಿಸಿ, ಅರ್ಜಿಯಲ್ಲಿ ಕೋರಿದಂತೆ ಪ್ರಸ್ತಾವಿತ 4 ಮತ್ತು 5 ನೇ ಪ್ರತಿವಾದಿಯರನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಬೇಕೆಂದು ಕೋರಿರುತ್ತಾರೆ.

**3**. ಈ ಮೇಲ್ಕಂಡ ಮಧ್ಯಂತರ ಅರ್ಜಿ ಸಂಖ್ಯೆಃ17 ಕ್ಕೆ ಪ್ರಸ್ತಾವಿತ ಪ್ರತಿವಾದಿಯರ ಪರ ವಕೀಲರು ತಕರಾರನ್ನು ಸಲ್ಲಿಸಿದ್ದು, ಸದರಿ ತಕರಾರಿನಲ್ಲಿನ ಅಂಶಗಳು ಈ ಕೆಳಕಂಡಂತೆ ಇವೆಃ-

4 ನೇ ಪ್ರತಿವಾದಿಯು ತನ್ನ ತಕರಾರಿನಲ್ಲಿ ದಾವಾ ಐಟಂ ನಂಬರ್ 10 ಮತ್ತು 11 ರ ಆಸ್ತಿಗಳಿಗೆ ತಾವು ಮಾಲೀಕರಾಗಿ ಸ್ವಾಧೀನಾನುಭವವನ್ನು ಹೊಂದಿದ್ದು, ಸದರಿ ಸ್ವತ್ತು ಮೂಲತಃ 4 ನೇ ಪ್ರತಿವಾದಿಯ ಅಜ್ಜನಾದ ತಿಮ್ಮಯ್ಯನವರಿಗೆ ಸೇರಿದ್ದು, ತಿಮ್ಮಯ್ಯನವರ ಪ್ರತ್ಯೇಕ ಸ್ವತ್ತಾಗಳಾಗಿದ್ದು, ಸದರಿ ಸ್ವತ್ತುಗಳು ವಾದಿ ಮತ್ತು ಪ್ರತಿವಾದಿಯರ ಒಟ್ಟು ಕುಟುಂಬದ ಸ್ವತ್ತುಗಳಾಗಿರುವುದಿಲ್ಲ. ತಿಮ್ಮಯ್ಯನವರ ಮರಣಾ ನಂತರ ಅವರ ಮೊಮ್ಮಗನಾದ ಪ್ರಸ್ತಾವಿತ 4 ನೇ ಪ್ರತಿವಾದಿಯು ತಿಮ್ಮಯ್ಯನವರ ಮಕ್ಕಳಾದ 1 ರಿಂದ 3 ನೇ ಪ್ರತಿವಾದಿಯರ ಅನುಮತಿಯನ್ನು ಪಡೆದು 4 ಮತ್ತು 5 ನೇ ಪ್ರತಿವಾದಿಯರು ತಮ್ಮ ಹೆಸರಿಗೆ ಪೌತಿ ಖಾತೆ ಆಧಾರದ ಮೇಲೆ ತಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಂಡಿದ್ದು, ಅದರಂತೆ 4 ಮತ್ತು 5 ನೇ ಪ್ರತಿವಾದಿಯರು ದಾವಾ ಐಟಂ ನಂಬರ್ 10 ಮತ್ತು 11 ಗಳಿಗೆ ನಿರುಪಾಧಿಕ ಮಾಲೀಕರಾಗಿರುತ್ತಾರೆ. ವಾದಿಯಾಗಲೀ, ಪ್ರತಿವಾದಿಗಳಾಗಲೀ ಸದರಿ ಸ್ವತ್ತುಗಳ ಮೇಲೆ ಯಾವುದೇ ಹಕ್ಕು ಮತ್ತು ವಿಭಾಗದ ಅಧಿಕಾರ ಇರುವುದಿಲ್ಲ. ಆದ್ದರಿಂದ ವಾದಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ-17 ನ್ನು ವಜಾಗೊಳಿಸಬೇಕೆಂದು ಕೋರಿಕೊಂಡಿರುತ್ತಾರೆ.

**4.** ಮೇಲ್ಕಾಣಿಸಿದ ಸಂಗತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಈ ಕೆಳಕಂಡ ಅಂಶಗಳು ನನ್ನ ಪರಿಶೀಲನೆಗೆ ಉದ್ಭವಿಸಿರುತ್ತವೆ:-

**<u>ಅಂಶಗಳು</u>**

1. **ಅರ್ಜಿದಾರರು ಮಧ್ಯಂತರ ಅರ್ಜಿ ಸಂಖ್ಯೆ:17 ರಲ್ಲಿ ಕೋರಿರುವಂತೆ ಪ್ರಸ್ತಾವಿತ ಅರ್ಜಿದಾರರನ್ನು 4 ಮತ್ತು 5 ನೇ ಪ್ರತಿವಾದಿಯರನ್ನಾಗಿ ಸೇರ್ಪಡೆ ಮಾಡಬೇಕೆಂಬ ಪರಿಹಾರವನ್ನು ಪಡೆಯಲು ಅರ್ಹರೆ?**
2. **ಯಾವ ಆದೇಶ?**

**5.** ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

**6.** ಮೇಲ್ಕಾಣಿಸಿದ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತಿರುತ್ತದೆ:-

**ಅಂಶ – 1 : ಸಕಾರಾತ್ಮಕವಾಗಿ,**

**ಅಂಶ – 2 : ಅಂತಿಮ ಆದೇಶದಂತೆ.**

**<u>ಕಾ ರ ಣ ಗ ಳು</u>**

**7. <u>ಅಂಶ – 1</u> :-** ವಾದಿಯು ಪ್ರಸ್ತುತ ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ದಾವಾ ಅನುಸೂಚಿತ ಸ್ವತ್ತುಗಳಿಗೆ ಸಂಬಂಧಿಸಿದಂತೆ ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನ ಪರಿಹಾರ ಕೋರಿ ಸಲ್ಲಿಸಿರುತ್ತಾರೆ.

**8.** ಪ್ರಸ್ತುತ ಈ ಮಧ್ಯಂತರ ಅರ್ಜಿ ಸಂಖ್ಯೆ:17 ನ್ನು ಅರ್ಜಿದಾರರು ಕ್ರಮಾದೇಶ 1 ನಿಯಮ 10(2) ಸಹಕಲಂ 151 ರ ಅಡಿಯಲ್ಲಿ ಅರ್ಜಿಯೊಂದಿಗೆ ಲಗತ್ತಿಸಿರುವ ಪ್ರಮಾಣಪತ್ರದಲ್ಲಿ ನಮೂದಿಸಿರುವ ಅಂಶಗಳನ್ನು ಪರಿಗಣಿಸಿ ಅರ್ಜಿಯಲ್ಲಿ ನಮೂದಿಸಿರುವ ಪ್ರಸ್ತಾವಿತ ಪ್ರತಿವಾದಿ 4 ಮತ್ತು 5 ರವರನ್ನಾಗಿ ಈ ದಾವೆಯಲ್ಲಿ ಸೇರ್ಪಡೆ ಮಾಡಲು ಅನುಮತಿಯನ್ನು ನೀಡಬೇಕೆಂದು ಕೋರಿ ಸಲ್ಲಿಸಿರುತ್ತಾರೆ.

**9.** ಅರ್ಜಿದಾರರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ-17 ಮತ್ತು ಅದಕ್ಕೆ ಲಗತ್ತಿಸಿರುವ ಪ್ರಮಾಣಪತ್ರ ಮತ್ತು ಪ್ರತಿವಾದಿಯರು ಸಲ್ಲಿಸಿರುವ ತಕರಾರು ಹಾಗೂ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು.

**10.** ಸದರಿ ದಾವೆಯಲ್ಲಿ ಪ್ರಸ್ತಾವಿತ 4 ನೇ ಪ್ರತಿವಾದಿಯು 1 ನೇ ಪ್ರತಿವಾದಿಯ ಮಗನಾಗಿದ್ದು, ಪ್ರಸ್ತಾವಿತ 5 ನೇ ಪ್ರತಿವಾದಿಯು 2 ನೇ ಪ್ರತಿವಾದಿಯ ಸೊಸೆಯಾಗಿದ್ದು, ದಾವಾ ಐಟಂ ನಂಬರ್ 10 ಮತ್ತು 11 ರ ಆಸ್ತಿಗಳನ್ನು ದಾವೆ ದಾಖಲಾದ ನಂತರ ತಮ್ಮ ಹೆಸರುಗಳಿಗೆ ಖಾತೆ ವರ್ಗಾವಣೆ ಮಾಡಿಕೊಂಡಿರುತ್ತಾರೆ. ಪ್ರತಿವಾದಿಗಳು ಪ್ರತಿವಾದ ಪತ್ರವನ್ನು ಸಲ್ಲಿಸುವಾಗ, ದಾವಾ ಆಸ್ತಿಯ ಖಾತೆ ಹೊಂದಿರುವಂತಹ ಪಕ್ಷಗಾರರನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲವೆಂದು ತಿಳಿಸಿದ್ದರಿಂದ ಸದರಿಯವರುಗಳನ್ನು ಈ ದಾವೆಯಲ್ಲಿ ಅವಶ್ಯಕ ಪಕ್ಷಕಾಗಾರರಾಗಿರುತ್ತಾರೆ, ಆದ್ದರಿಂದ ಸದರಿಯವರುಗಳನ್ನು ಈ ದಾವೆಯಲ್ಲಿ ಅವಶ್ಯಕ ಪಕ್ಷಕಾರರನ್ನಾಗಿ ಸೇರಿಸುವುದು ತುಂಬಾ ಅವಶ್ಯಕವಾಗಿರುತ್ತದೆಂದು ಅರ್ಜಿದಾರರ ಪರ ವಕೀಲರು ತಮ್ಮ ವಾದವನ್ನು ಮಂಡಿಸಿರುತ್ತಾರೆ.

**11.** ಅದಕ್ಕೆ ಪೂರಕವಾಗಿ ಪ್ರಸ್ತಾವಿತ 4 ಮತ್ತು 5 ನೇ ಪ್ರತಿವಾದಿ ಪರ ವಕೀಲರು ದಾವಾ ಐಟಂ ನಂಬರ್ 10 ಮತ್ತು 11 ರ ಆಸ್ತಿಗಳು ತಿಮ್ಮಯ್ಯನವರ ಪ್ರತ್ಯೇಕ ಸ್ವತ್ತುಗಳಾದ್ದು, ಸದರಿ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳಾಗಿರುವುದಿಲ್ಲ. ಸದರಿ ಸ್ವತ್ತುಗಳನ್ನು ತಿಮ್ಮಯ್ಯನವರ ಮರಣಾ ನಂತರ 1 ರಿಂದ 3 ನೇ ಪ್ರತಿವಾದಿಗಳ ಅನುಮತಿ ಮೇರೆಗೆ ಪ್ರಸ್ತಾವಿತ 4 ಮತ್ತು 5 ನೇ ಪ್ರತಿವಾದಿಯರು ತಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಂಡಿರುತ್ತಾರೆ. ಆದ್ದರಿಂದ ವಾದಿಗೆ ಮತ್ತು ಪ್ರತಿವಾದಿಯರಿಗೆ ಸದರಿ ಸ್ವತ್ತುಗಳ ಮೇಲೆ ಯಾವುದೇ ಹಿತಾಸಕ್ತಿ ಮತ್ತು ವಿಭಾಗದ ಹಕ್ಕು ಇರುವುದಿಲ್ಲ. ಆದ್ದರಿಂದ ಸದರಿಯವರು ಈ ದಾವೆಯಲ್ಲಿ ಅವಶ್ಯಕತೆ ಇರುವುದಿಲ್ಲ. ಆದ್ದರಿಂದ ಮಧ್ಯಂತರ ಅರ್ಜಿ ಸಂಖ್ಯೆ -17 ನ್ನು ತಿರಸ್ಕರಿಸಬೇಕೆಂದು ಪ್ರಸ್ತಾವಿತ 4 ಮತ್ತು 5 ನೇ ಪ್ರತಿವಾದಿಯರ ಪರ ವಕೀಲರು ತಮ್ಮ ವಾದವನ್ನು ಮಂಡಿಸಿರುತ್ತಾರೆ.

**12.** ಉಭಯ ಪಕ್ಷಗಾರರ ಹೇಳಿಕೆಯನ್ನು ಪರಿಶೀಲಿಸಲಾಗಿ ಈ ಕುರಿತಾಗಿ ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ **1** ನಿಯಮ **10(2)**ನ್ನು ಪರಿಶೀಲಿಸುವುದು ಮುಖ್ಯವಾಗಿರುತ್ತದೆ. ಸದರಿ ಕಾನೂನಿನ ಪರಿಕಲ್ಪನೆಯು ಈ ಕೆಳಕಂಡಂತೆ ಇದೆ:-

> **Court may strike out or add parties:- The Court may at any stage of the proceedings, either upon or without the application of either party, and on such terms as may appear to the Court to be just, order that the name of any party improperly joined, whether as plaintiff or defendant, be struck out, and that the name of any person who ought to have been joined, whether as plaintiff or defendant, or whose presence before the Court may be necessary in order to enable the Court effectually and completely to adjudicate upon and settle all the questions involved in the suit, be added.**

**13**. ಈ ಮೇಲ್ಕಂಡ ಕಾನೂನಿನ ಪರಿಕಲ್ಪನೆಯನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು. ಯಾವುದೇ ಒಂದು ದಾವೆಯನ್ನು ಪರಿಣಾಮಕಾರಿಯಾಗಿ ಸಂಪೂರ್ಣವಾಗಿ ಹಾಗೂ ಎಲ್ಲಾ ವಿವಾದಾಂಶಗಳ ಕುರಿತು ಪರಿಪೂರ್ಣ ವಿಚಾರಣೆಯನ್ನು ನಡೆಸಲು ಅವಶ್ಯಕ ಪಕ್ಷಗಾರರ ಸೇರ್ಪಡೆ ಇದೆ ಎಂದು ನ್ಯಾಯಾಲಯಕ್ಕೆ ಕಂಡುಬಂದಲ್ಲಿ ಅಂತಹ ಪಕ್ಷಗಾರರನ್ನು ದಾವೆಯಲ್ಲಿ ಸೇರ್ಪಡೆ ಮಾಡಬಹುದು ಎಂದು ಉಲ್ಲೇಖಿಸಿರುತ್ತದೆ.

**14.** ಈ ಕುರಿತು ಪರಿಶೀಲಿಸಲಾಗಿ, ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಕೋರಿಕೊಂಡಂತೆ ಪ್ರಸ್ತಾವಿತ 4 ಮತ್ತು 5 ನೇ ಪ್ರತಿವಾದಿಯರನ್ನು ಈ ದಾವೆಯಲ್ಲಿ ಸೇರಿಸುವುದು ಅವಶ್ಯಕತೆ ಇರುತ್ತದೆ. ಏಕೆಂದರೆ ಸದರಿ ದಾವೆಯನ್ನು ವಾದಿಯು ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನ ಕೋರಿ ಸಲ್ಲಿಸಿರುವುದರಿಂದ ದಾವಾ ಅನುಸೂಚಿ

ಸ್ವತ್ತುಗಳಲ್ಲಿ ಅರ್ಜಿದಾರರಿಗೆ ಹಕ್ಕು ಇದೆಯೇ ಇಲ್ಲವೇ ಎಂಬುದನ್ನು ರುಜುವಾತುಪಡಿಸುವ ಜವಾಬ್ದಾರಿ ಅರ್ಜಿದಾರರ ಮೇಲಿರುತ್ತದೆ, ಪ್ರಸ್ತಾವಿತ 4 ಮತ್ತು 5 ನೇ ಪ್ರತಿವಾದಿಯರ ಹೆಸರಿನಲ್ಲಿ ದಾವಾ ಐಟಂ ನಂಬರ್ 10 ಮತ್ತು 11 ರ ಆಸ್ತಿಗಳು ಇರುವುದರಿಂದ ಸದರಿಯವರನ್ನು ಈ ದಾವೆಯಲ್ಲಿ ಸೇರ್ಪಡಿಸಿರುವುದರಿಂದ ಈ ದಾವೆಯನ್ನು ಅಂತಿಮವಾಗಿ ಪರಿಣಾಮಕಾರಿಯಾಗಿ ಸಂಪೂರ್ಣವಾಗಿ ತೀರ್ಮಾನಿಸಬಹುದಾಗಿರುತ್ತದೆ ಹಾಗೂ ವ್ಯಾಜ್ಯಗಳ ಬಾಹುಳ್ಯತೆಯನ್ನು ತಡೆಯುವ ದೃಷ್ಟಿಯಿಂದ ಪ್ರಸ್ತಾವಿತ ಪಕ್ಷಗಾರರನ್ನಾಗಿ ಸೇರಿಸಲು ಅನುಮತಿ ನೀಡುವುದು ಸೂಕ್ತವೆನಿಸುತ್ತದೆ. ಒಂದು ವೇಳೆ ಅವಶ್ಯಕ ಪಕ್ಷಕಾರರನ್ನು ಬಿಟ್ಟು ದಾವೆಯಲ್ಲಿ ಪರಿಹಾರವನ್ನು ನೀಡಲು ಬರುವುದಿಲ್ಲವಾದ್ದರಿಂದ ಹಾಗೂ ಪ್ರಸ್ತಾವಿತ 4 ಮತ್ತು 5 ನೇ ಪ್ರತಿವಾದಿಯರನ್ನು ಈ ದಾವೆಯಲ್ಲಿ ಸೇರಿಸಿದ ನಂತರ ಸದರಿಯವರನ್ನು ಪಾಟೀಸವಾಲು ಮಾಡುವ ಮೂಲಕ ಪ್ರಶ್ನಿಸಬಹುದಾದ ಹಕ್ಕು ಸದರಿಯವರಿಗೆ ಇರುವುದರಿಂದ ಈ ದಾವೆಯಲ್ಲಿ ಪ್ರಸ್ತಾವಿತ 4 ಮತ್ತು 5 ನೇ ಪ್ರತಿವಾದಿಯರನ್ನಾಗಿ ಸೇರಿಸಲು ಅನುಮತಿ ನೀಡುವುದು ನ್ಯಾಯ ಮತ್ತು ಸಮಾನತೆಯ ದೃಷ್ಟಿಯಿಂದ ಸೂಕ್ತವೆಂದು ನ್ಯಾಯಾಲಯದ ಅಭಿಪ್ರಾಯವಾಗಿರುತ್ತದೆ. ಆದ್ದರಿಂದ ಅಂಶ ಸಂಖ್ಯೆ-1 ನ್ನು ಸಕಾರಾತ್ಮಕವಾಗಿ ನಿರ್ಣಯಿಸಲಾಗಿದೆ.

**15.** **ಅಂಶ – 2 :-** ಮೇಲ್ಕಾಣಿಸಿದ ಎಲ್ಲಾ ಕಾರಣಗಳ ಮೇಲಿಂದಾಗಿ ಈ ಕೆಳಕಾಣಿಸಿದಂತೆ ಆದೇಶಿಸಿರುತ್ತೇನೆ:**-**

**ಆದೇಶ**

ಅರ್ಜಿದಾರರು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 1, ನಿಯಮ 10(2) ರ ಅಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ-17 ನ್ನು ಪುರಸ್ಕರಿಸಲಾಗಿದೆ**.**

ಖರ್ಚಿನ ಬಗ್ಗೆ ಯಾವುದೇ ಆದೇಶವಿಲ್ಲ**.**

ದಾವೆಯನ್ನು ದಿ:**04.11.2024** ಕ್ಕೆ ವಾದಪತ್ರದ ತಿದ್ದುಪಡಿಗಾಗಿ ಮತ್ತು ತಿದ್ದುಪಡಿ ವಾದಪತ್ರವನ್ನು ಸಲ್ಲಿಸಲು ನಿಗಧಿಪಡಿಸಲಾಗಿದೆ**.**

(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಕಂಪ್ಯೂಟರ್ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ, ಓದಿ ತಿದ್ದಿ, ಪ್ರತಿ ತೆಗೆದು ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ: 22 ನೇ ಅಕ್ಟೋಬರ್ 2024 ರಂದು ನಾನು ಉದ್ಘೋಷಿಸಿದ್ದೇನೆ.)

-ಸಹಿ-
(ಶ್ರೀಮತಿ ಸವಿತರಾಣಿ ಹೆಚ್.ವಿ.)
2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕಡೂರು.

Visit **ecourts.gov.in** for updates or download mobile app “**eCourts Services**” from Android or iOS